ಗುತ್ತಿಗೆದಾರರು ಯಾರೂ ಬರುವುದಕ್ಕೆ ತಯಾರಿಲ್ಲ. ಅದ ಕಾರಣ ನಾವು ಅವರನ್ನು ಸಂಧಾನಕ್ಕೆ ಕರೆದಿದ್ದೇವೆ. ಮಾರ್ಚ್ ತಿಂಗಳಲ್ಲಿ ಅವರು ಬರುತ್ತೇವೆಂದು ಹೇಳಿದ್ದಾರೆ. ಬಂದ ನಂತರ ನಾವು ಎಷ್ಟು ಸಾಧ್ಯ ಇದೆ ಅಷ್ಟು ಬೇಗ ಕ್ರಮ ತೆಗೆದುಕೊಳ್ಳುತ್ತೇವೆಂದು ಇವತ್ತಿನ ದಿವಸ ಹೇಳುತ್ತೇನೆ.

ಶ್ರೀ ವಸಂತ ವಿ. ಸಾಲಿಯಾನ್ : ಕ್ರಮದ ಪ್ರಶ್ನೆ ಇಲ್ಲ. 1993ನೇ ಇಸವಿಯಲ್ಲಿ ಅಕ್ಟೋಬರ್‌ನಲ್ಲಿ ಇದಕ್ಕೆ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ದೊರಕಿದೆ. ನಾನು ಮತ್ತು ಮಾನ್ಯ ಆಗಿನ ಮುಖ್ಯಮಂತ್ರಿಗಳು ಹೋಗಿ ಫೌಂಡೇಷನ್ ಹಾಕಿ ಸುಮಾರು ಒಂದೂವರೆ ವರ್ಷ ಆದರೂ ಸಹ ನಮ್ಮ ಇಲಾಖೆಯ ಅಧಿಕಾರಿಗಳಿಗೆ ಟೆಂಡರ್ ಕರೆಯುವಂತಹ ಯೋಗ್ಯರ್ತೆ ಇಲ್ಲದೆ ಹೋದರೆ ಹೇಗೆ? ಅವರ ಜೊತೆ ಈಗ ಸಂಧಾನ ಮಾಡುತ್ತೇವೆಂದು ತಾವು ಹೇಳುತ್ತಿದ್ದೀರಿ ಇದಕ್ಕೆ ಮುಂಚೆ ತಾವು ಸಂಧಾನ ಪ್ರಾರಂಭ ಮಾಡಿದ್ದರೆ. ಈ ರೀತಿ ತೊಂದರೆ ಬರುತ್ತಾ ಇರಲಿಲ್ಲ. ಆದುದರಿಂದ ಇದು ನಿಮ್ಮ ಇಲಾಖೆಯ ಒಂಟು ಲ್ಯಾಪ್ಸ್ಸ್ ಆದುದರಿಂದ ತಾವು ಈ ಒಂದು ಕಾಮಗಾರಿಯನ್ನು ಇವತ್ತು ಸಹ ಪ್ರಾರಂಭ ಮಾಡದೆ ಇದ್ದರೆ ಬರುವ ವರ್ಷ ಇದು ಒಂದು ಕೋಟಿ ರೂಪಾಯಿಯಾಗುತ್ತದೆ. ಏಕೆಂದರೆ ಸ್ಟೀಲ್ ದರ ಏರುತ್ತದೆ. ಸಿಮೆಂಟ್ ದರ ಹೆಚ್ಚಾಗುತ್ತದೆ. ಆದ್ದರಿಂದ ಒಂದು ಕೋಟಿ ರೂಪಾಯಿಯಲ್ಲಿ ನಾವು ಮಾಡುವುದಕ್ಕಾಗುವುದಿಲ್ಲ ಎಂದು ತಾವು ಉತ್ತರ ಕೊಡುತ್ತೀರಿ. ಆದ್ದರಿಂದ ನಾನು ಇವತ್ತು ಸನ್ಯಾನ್ಯ ಅಧ್ಯಕ್ಷರ ಮುಖೇನ ತಮಗೆ ಒತ್ತಾಯ ಮಾಡುತ್ತೀದ್ದೇನೆ. ಇದು ಬಹಳ ಪ್ರಮುಖ್ಯವಾದ ನದಿಯಲ್ಲಿ ಏಕೆಂದರೆ ಒಂದು ಕಡೆಯಲ್ಲಿ ಮೀನುಗಾರಿಕೆ ರಸ್ತೆ, ಇನ್ನೊಂದು ಕಡೆಯಲ್ಲಿ ನ್ಯಾಷನಲ್ ಹೈವೇ, ಇದಕ್ಕೆ ಸಂಪರ್ಕವಾದಂತಹ ಕೃಷಿಕರು ಹೋಗಲಿಕ್ಕೆ ಮೀನುಗಾರರು ಹೋಗಲಿಕ್ಕೆ, ಸಾರ್ವಜನಿಕರಿಗೆ ಬಹಳ ಪ್ರಾಮುಖ್ಯವಾದಂತಹ ಒಂದು ಸೇತುವೆ.

11.40 ಎ.ಎಂ.

ಆದುದರಿಂದ ತಾವು ಈ ವರ್ಷದಲ್ಲಿ ಪ್ರಾರಂಭ ಮಾಡದಿದ್ದರೆ ಮುಂದಿನ ವರ್ಷಕ್ಕೆ ಹೆಚ್ಚಾಗಿ ಒಂದು ಕೋಟಿ ಮೇಲೆ ಹೋಗುತ್ತದೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : 1993ರಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಿದೆ. 1993ರಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಿದ ನಂತರ ತಾಂತ್ರಿಕ ಮಂಜೂರಾತಿ ನೀಡುವ ಕಾಲಕ್ಕೆ ಕೆಲವು ಪಾಯಾದಲ್ಲಿ ಬದಲಾಯಿತು. Change on estianales ಆಯಿತು. ಹೀಗಾಗಿ ಕೆಲಸ ಸ್ವಲ್ಪ ನಿಧಾನವಾದುದು ನಿಜ. ಆದರೆ ಒಂದು ಮಾತ್ರ ನಾನು ಸದಸ್ಯರಿಗೆ ಅಶ್ವಾಸನೆಯನ್ನು ಕೊಡುತ್ತೇನೆ. ಆದಷ್ಟು ಬೇಗನೆ ಈ ಕೆಲಸ ಪ್ರಾರಂಭ ಮಾಡುತ್ತೇನೆ.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆ ಮುಗಿಯಿತು.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಡಿ. ಮಂಜುನಾಥ : ದಿನಾಂಕ 26ನೇ ಫೆಬ್ರವರಿ 1996ರ 4ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 116 ಪ್ರಶ್ನೆಗಳ ಪೈಕಿ 65 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸಿದ್ದೇನೆ.

ಲೋಕೋಪಯೋಗಿ ಇಲಾಖೆಗಳ ರಸ್ತೆ ದುರಸ್ತಿಮಾಡುವುದು.

675 - ಶ್ರೀ ಅಪ್ಪಚ್ಚು ರಂಜನ್ (ಸೋಮವಾರ ಪೇಟೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?